ನೋಟಿಸ್.

ತಾರೀಖು 27ನೇ ಅಕ್ಟೋಬರ 1896.

ಬೆಂಗಳೂರು ಡಿಸ್ಟ್ರಿಕ್ಟು 1ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ಸ್ ಎ. ನರಸಿಂಹಯ್ಯಂಗಾರ್ಯರವರು ಸೆಪ್ಟಂಬರ್ 17ನೇ ತಾರೀಖಿನಲ್ಲಿ ತಮ್ಮ ಮನೆಯ ಆಫಿಸ್ ರೂಮ್ ಮೇಜಿನ ಮೇಲೆ ಇಟ್ಟಿದ್ದ ಈ ಕೆಳಗಿನ ಕಪ್ಪೀಲಿನಲ್ಲಿ ಕಂಡ ಫೊಡಿಯಾರ ಮತ್ತು ಸರಪಣಿ ಸಹ ಕಳವಾಗಿರುವದಾಗಿಯೂ ಇದನ್ನು ಪತ್ತೇಮಾಡಿ ಕೊಟ್ಟವರಿಗೆ 10 ರೂಪಾಯಿಗಳು ಇನಾಂ ಕೊಡುವದಾಗಿ ಬರಸಿರುತ್ತಾರೆ.

(ವಾಚ್ ಮತ್ತು ಸರಪಣಿಯ ತಪ್ಪೀಲ್.)

ಪಿ. ಆರ್. ಅಂಡ್ ಸನ್ಸ್, ರೈಲ್ವೆ ರೆಗ್ಯುಲೇಟರ್ ಎಂದು ಇಂಗ್ಲೀಷ್ ಅಕ್ಷರದಲ್ಲಿ ವಾಚ್ ಮೇಲೆ ಗುರ್ತು ಇದೆ. ಇದರ ಕ್ರಯ 25 ರೂಪಾಯಿ.

ಇದಕ್ಕೆ ಹೂಕಿ ಇರುವ ಭಂಗಾರದ ಸರಪಣಿಯು ಮೂರುಚಿಕ್ಕ ಸರಪಣಿಗಳು ಸಂಗಡ ಜಾಯಿಂಟ್ ಆಗಿಯು ವಂಮಕಡೆ ಹಿತ್ತಾಳೆ ವುಂಗ್ರವು ಮತ್ತೊಂದುಕಡೆ ಭಂಗಾರದ ವುಂಗ್ರವು ಹಾಕಿದ್ದಾಗಿಯೂ ಇದೆ. ಇದು 9 ಇಂಚ್ ಉದ್ದ ಅಗಲ $\frac{3}{4}$ ಇಂಚ್ ಉಳ್ಳದ್ದಾಗಿಯೂ ಇದೆ. ಇದರ ಕ್ರಯ 40 ರೂಪಾಯಿಗಳು.

ಜೆನಿಂಗ್,
ಸೂಪರ್ಟೆಂಡೆಂಟ್ ಆಫ್ ಪೊಲೀಸ್.

ಕೋಲಾರ ಮುನ್ಸಿಫ್ ಕೋರ್ಟು ಸಂ॥ಕ್ಕೆ.

ಸ್ 1895—96ನೇ ಇಸವಿ ಸಿವಿಲ್ ನಂಬರ್ 852.

ವಾದಿ ಮುಳಬಾಗಲ್ ತಾಲ್ಲೂಕು ನೊಂಬರಹಳ್ಳಿ ಇರುವ ಶಾಪೂರು ಕಿಚ್ಚಯ್ಯ.
ಪ್ರತಿವಾದಿಗಳು ಕೋಲಾರದಲ್ಲಿ ಇರುವರು.

1ನೇ ಅತಾರ್ ಪುಸರ್ಮೂಸಾಬ್.
2ನೇ ಇವನ ದಾಯಾದಿ ಹಸ್ರತ್‌ಸಾಬ್.
3ನೇ ಅತಾರ್ ಮುಖ್ತುಂಸಾಬ್.
4ನೇ ಅತ್ತಾರ್ ಗವುಸ್‌ಸಾಬ್.
5ನೇ ಜವುದ್ರಿ ಮಹಂಮದ್ ಸಾಬ್.
6ನೇ ಸ್ಕೂಲ್ ಮಾಸ್ಟರ್ ಅಹಂಮದಲ್ಲಿ.

ವಾದಿಯು ಹೇಳಿಕೊಳ್ಳುವದೇನೆಂದರೆ,—ಕೋಲಾರದಲ್ಲಿ ಇರುವ ವಾದಿಬಗೆ ಮನೆ ಹಿತ್ತಲು ಜಮೀನು ಭೂವಿ ನೀರುಹೋಗತಕ್ಕ ದಾರಿ ಇವೆಲ್ಲಾ ಪ್ರತಿವಾದಿಗಳು ಆಕ್ರಮಿಸಿಕೊಂಡು ಮಸೀದಿಗೆ ಕೇರಸಿಕೊಂಡಿರುವ ನಿಮಿತ್ತ ಇವೆಲ್ಲಾ ಬರಮಾಡಿಸಿಕೊಡತಕ್ಕ ಬಗ್ಗೆ ಕೋಲಾರದಲ್ಲಿ 1896ನೇ ಇಸವಿ ಮಾರ್ಚಿ ಯಾ ಆ ಸುಮಾರು ಕಾಲದಲ್ಲಿ ವ್ಯಾಜ್ಯ ಕಾರಣ ಉಂಟಾಗಿ ಈ ದಾವಾ ತರಲ್ಪಟ್ಟಿರುತ್ತೆ.

ಬಿ. ವೆಂಕಟಾಚಾರ್,
ಮುನ್ಸಿಫ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 28ನೇ ಅಕ್ಟೋಬರ್ 1896.

ಮೈಸೂರ್ ಗವರ್ಮೆಂಟ್ ತುಮಕೂರು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರ್‌ಗಳು ತಮ್ಮ ತಮ್ಮ ಸೇವಿಂಗ್ಸ್ ಬ್ಯಾಂಕ್ ಪ್ಯಾಸ್ ಬುಕ್ಕುಗಳನ್ನು 1895—96ನೇ ಇಸವಿಯ ಬಡ್ಡಿ ಮೊಬಲಗನ್ನು ದಾಖಲ್ಮಾಡುವದಕ್ಕೋಸ್ಕರ ಈ ಆಪೀಸಿಗೆ ಕಳುಹಿಸಿ ಕೊಡಬೇಕಾಗಿ ಕೇಳಿಕೊಳ್ಳಲ್ಪಟ್ಟಿದೆ.

ಟಿ. ಮಿರ್ಕಮಾಲುದ್ದೀನ್ ಅಲಿಖಾನ್,
ಟ್ರೈಜರಿ ಆಫಿಸರ್.

ನಗರದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ್ 1896—97ನೇ ಇಸವಿ ಮಿ॥ ಅರ್ಜೀ ನಂಬರ್ 85.

ಮೃತಪಟ್ಟ ಶಿವಲಿಂಗಪ್ಪ ಯಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಜವಳಿ ಶಾಂತವೀರಪ್ಪ ಚನ್ನಗಿರಿವಾಸಸ್ಥ ಜವಳಿ ಶಾಂತವೀರಪ್ಪನು, ಮೃತಪಟ್ಟ ಸದರಿ ಶಿವಲಿಂಗಪ್ಪ ಯಂಬವರಿಗೆ ದೊಡಪ್ಪನ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಗಿರೀ ಸ್ಥಳದ ಶಾಂತವೀರಪ್ಪ ಯಂಬವರು ಚನ್ನಗಿರಿ ವಾಸಸ್ಥರಾಗಿ ಮೃತ ಪಟ್ಟ ಶಿವಲಿಂಗಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 250 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತವೀರಪ್ಪಯಂಬರ ಅರ್ಜಿಯನ್ನು 1896ನೇ ಇಸವಿ ನವಂಬರ್ ತಿಂಗಳ ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿವಲಿಂಗಪ್ಪಯಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಅಕ್ಟೋಬರ್ ತಿಂಗಳ 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಎ. ವೆಂಕಟರಾವ್,
ಫಾರ್ ಡಿಸ್ಟ್ರಿಕ್ಟು ಜಡ್ಜ್.